ಸೂರ್ಯಕಾಂತಿ: ಪ್ರಮುಖ ಸಂಕರಣ ತಳಿಗಳು

ಎಂ. ಎಸ್. ಉಮಾ ಮತ್ತು ವೈ. ಜಿ. ಷಡಕ್ಷರಿ

ಅಖಿಲ ಭಾರತ ಸಂಯೋಜಿತ ಸೂರ್ಯಕಾಂತಿ ಬೆಳೆ ಪ್ರಾಯೋಜನೆ, ಕೃವಿವಿ, ಜಿಕೆವಿಕೆ, ಬೆಂಗಳೂರು – 560 065

☎: 9844638869 ಮಿಂಚಂಚೆ: umauas@gmail.com

ಜಾಗತಿಕ ಮಟ್ಟದಲ್ಲಿ ಸೂರ್ಯಕಾಂತಿ ಎಣ್ಣೆಕಾಳು ಬೆಳೆ ಬೆಳೆಯುವ ದೇಶಗಳಲ್ಲಿ ಅರ್ಜೆಂಟೈನ, ಭಾರತ, ಚೀನಾ ಮತ್ತು ಅಮೇರಿಕಾ ಮುಂಚೂಣಿಯಲ್ಲಿವೆ. 1970ರ ದಶಕದಲ್ಲಿ ಭಾರತಕ್ಕೆ ಪರಿಚಯಿಸಿದ ಬೆಳೆಗಳಲ್ಲಿ ಈ ಬೆಳೆಯೂ ಒಂದು. ಇತ್ತೀಚಿನ ವರ್ಷಗಳಲ್ಲಿ ಸೂರ್ಯಕಾಂತಿ ನಮ್ಮ ದೇಶದ ಹಾಗೂ ರಾಜ್ಯದ ಅತಿ ಪ್ರಮುಖವಾದ ಎಣ್ಣೆ ಕಾಳು ಬೆಳೆಯಾಗಿ ರೂಪುಗೊಂಡಿದೆ. ಸೂರ್ಯಕಾಂತಿ ಬೆಳೆಯುನ್ನು ಸುಮಾರು 35 ವರ್ಷಗಳಿಂದಲೂ ನಮ್ಮ ದೇಶದಲ್ಲಿ ಸಾಗುವಳಿ ಮಾಡುತ್ತಿದ್ದು, ಕರ್ನಾಟಕದಲ್ಲಿ ಈ ಬೆಳೆಯ ಬೇಸಾಯ ಇತರೆ ಎಣ್ಣೆಕಾಳು ಬೆಳೆಗಳಿಗೆ ಹೋಲಿಸಿದರೆ ಬಹಳ ಇತ್ತೀಚಿನದು. ಏಕೆಂಬುದನ್ನು ತಿಳಿಯಲು ಲೇಖನ ಓದಿ.

ಕಡಿಮೆ ಅವಧಿಯಲ್ಲಿಯೇ ಸೂರ್ಯಕಾಂತಿಯು ರೈತರನ್ನು ಆಕರ್ಷಿಸಿಸಲೂ ಅನೇಕ ಕಾರಣಗಳಿವೆ. ಅವುಗಳನ್ನು ಇಲ್ಲಿ ಪಟ್ಟಿ ಮಾಡಲಾಗಿದೆ.

- ಇದು ವರ್ಷದ ಎಲ್ಲಾ ಕಾಲದಲ್ಲಿಯೂ ಬೆಳೆಯಬಹುದಾದ ಬೆಳೆ

  (ಮುಂಗಾರು: ಜೂನ್–ಜುಲೈ, ಹಿಂಗಾರು: ಸೆಪ್ಟೆಂಬರ್–ಅಕ್ಟೋಬರ್ ಮತ್ತು ಬೇಸಿಗೆಯಲ್ಲಿ: ಜನವರಿ–ಫೆಬ್ರವರಿ)
- ಶೀಘ್ರವಾಗಿ ಕೊಯ್ಲಿಗೆ ಬರುವ ಸಾಮರ್ಥ್ಯ
- ವಿವಿಧ ಬಗೆಯ ಮಣ್ಣುಗಳಲ್ಲಿ (ಕಪ್ಪು, ಕೆಂಪು, ಮರಳು ಮಿಶ್ರಿತ ಕೆಂಪು) ಬೆಳೆಯಬಹುದಾದ ಗುಣ
- ಶುಷ್ಕ ವಾತಾವರಣಕ್ಕೆ ಹೊಂದಿಕೊಳ್ಳುವ ಶಕ್ತಿ
- ಅಧಿಕ ಇಳುವರಿ ಕೊಡುವ ಸಾಮರ್ಥ್ಯ
- ಸುಲಭ ಬೇಸಾಯ ಮತ್ತು ಅಧಿಕ ಆದಾಯ

ನಮ್ಮ ದೇಶದ ಒಟ್ಟು ಸೂರ್ಯಕಾಂತಿ ಬೆಳೆಯ ವಿಸ್ತೀರ್ಣದಲ್ಲಿ ಸುಮಾರು ಅರ್ಧದಷ್ಟು ಕರ್ನಾಟಕ ರಾಜ್ಯದ್ದೇ ಆಗಿರುತ್ತದೆ. ಆದುದರಿಂದ ನಮ್ಮ ರಾಜ್ಯಕ್ಕೆ "ಸೂರ್ಯಕಾಂತಿ ರಾಜ್ಯ" ವೆಂಬ ಹೆಗ್ಗಳಿಕೆಯೂ ಇದೆ. ಈ ಬೆಳೆಯನ್ನು ನಮ್ಮ ದೇಶದಲ್ಲಿ ಮುಖ್ಯವಾಗಿ ದಕ್ಷಿಣದ ರಾಜ್ಯಗಳಾದ ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರ ಮತ್ತು ತಮಿಳುನಾಡು ಹಾಗೂ ಉತ್ತರ ಭಾರತದ ಪಂಜಾಬ್, ಹರಿಯಾಣ, ಉತ್ತರ ಪ್ರದೇಶ, ಬಿಹಾರ ಮತ್ತು ಇತ್ತೀಚೆಗೆ ಪಶ್ಚಿಮ ಬಂಗಾಳದಲ್ಲಿಯೂ ಸಹ ಒಂದು ಪ್ರಮುಖ ಎಣ್ಣೆಕಾಳು ಬೆಳೆಯಾಗಿ ಬೆಳೆಯಲಾಗುತ್ತಿದೆ.

ಸೂರ್ಯಕಾಂತಿ ಖುಷ್ಕಿ ಮತ್ತು ನೀರಾವರಿ ಆಶ್ರಯದಲ್ಲಿ ಒಂದು ಲಾಭದಾಯಕ ಬೆಳೆ. ಇದನ್ನು ನಮ್ಮ ರಾಜ್ಯದ 23 ಜಿಲ್ಲೆಗಳಲ್ಲಿ ಬೆಳೆಯಲಾಗುತ್ತಿದ್ದು, ಬಿಜಾಪುರ, ಬಾಗಲಕೋಟೆ, ರಾಯಚೂರು, ಬಳ್ಳಾರಿ, ಗುಲ್ಬರ್ಗ, ಕೊಪ್ಪಳ, ಚಿತ್ರದುರ್ಗ, ದಾವಣಗೆರೆ, ತುಮಕೂರು, ಹಾಸನ, ಚಿಕ್ಕಮಗಳೂರು ಮತ್ತು ಕೋಲಾರ ಸೂರ್ಯಕಾಂತಿ ಬೆಳೆಯುವ ಪ್ರಮುಖ ಜಿಲ್ಲೆಗಳು.

ಸೂರ್ಯಕಾಂತಿ ಪರಕೀಯ ಪರಾಗಸ್ಪರ್ಶವಾಗುವ ಬೆಳೆಯಾಗಿರುವುದರಿಂದ, ಹೈಬ್ರಿಡ್ ಅಥವಾ ಶಕ್ತಿಮಾನ್ ತಳಿಗಳನ್ನು ಅಭಿವೃದ್ಧಿ ಪಡಿಸಲು ಅನುಕೂಲಕರವಾಗಿರುತ್ತದೆ. ಈ ನಿಟ್ಟಿನಲ್ಲಿ ಹಲವಾರು ವರ್ಷಗಳಿಂದ ಸಂಶೋಧನೆಗಳು ಪ್ರಪಂಚದಾದ್ಯಂತ ನಡೆಯುತ್ತಲಿವೆ. ಸೂರ್ಯಕಾಂತಿಯ ಹೂಗಳ ಪರಾಗಸ್ಪರ್ಶ ಕ್ರಿಯೆಯಲ್ಲಿ ಜೇನು ನೊಣಗಳು ಪ್ರಮುಖ ಪಾತ್ರ ವಹಿಸುತ್ತಿವೆ.

ಕರ್ನಾಟಕದಲ್ಲಿ ಸೂರ್ಯಕಾಂತಿ ತಳಿ ಅಭಿವೃದ್ಧಿ ಕಾರ್ಯ

ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನ ವತಿಯಿಂದ "ಅಖಿಲ ಭಾರತ ಸಂಯೋಜಿತ ಸೂರ್ಯಕಾಂತಿ ಬೆಳೆ ಪ್ರಾಯೋಜನೆ" ಎಂಬ ಕೇಂದ್ರವನ್ನು 1972 ನೇ ಸಾಲಿನಲ್ಲಿ ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಸೂರ್ಯಕಾಂತಿ ತಳಿ ಅಭಿವೃದ್ಧಿ, ಬೇಸಾಯ ಕ್ರಮಗಳು, ರೋಗ ಹಾಗೂ ಕೀಟಗಳ ಸಮಗ್ರ ನಿರ್ವಹಣೆ ಬಗ್ಗೆ ಸಂಶೋಧನಾ ಕಾರ್ಯ ಕೈಗೊಳ್ಳಲು ಸ್ಥಾಪಿಸಲಾಯಿತು.

1976ರಲ್ಲಿ ಇ.ಸಿ–68415 ಎಂಬ ತಳಿಯನ್ನು ಬಿಡುಗಡೆ ಮಾಡಲಾಯಿತು. ಈ ತಳಿಯು 105 – 115 ದಿನಗಳ ಅವಧಿಯದಾಗಿದ್ದು, ಸರಾಸರಿ ಶೇ. 40 – 42 ಎಣ್ಣೆಯ ಅಂಶ ಹಾಗೂ ಖುಷ್ಕಿ ಬೇಸಾಯದಲ್ಲಿ 10 – 12 ಕ್ವಿಂ./ಹೆ. ಕಾಳಿನ ಇಳುವರಿ ಕೊಡುವ ಸಾಮರ್ಥ್ಯ ಹೊಂದಿತ್ತು. ಮಾರ್ಡೆನ್ ಎಂಬ ಮತ್ತೊಂದು ಅಲ್ಪಾವಧಿ (70 – 75 ದಿನಗಳು) ತಳಿಯನ್ನು 1978 ರಲ್ಲಿ ಬಿಡುಗಡೆ ಮಾಡಲಾಯಿತು. ಇದು ಗಿಡ್ಡ ತಳಿಯಾಗಿದ್ದು (80–90 ಸೆಂ.ಮೀ.), ಶೇ. 34 –35 ರಷ್ಟು ಎಣ್ಣೆ ಅಂಶವನ್ನು ಹೊಂದಿತ್ತು. ಈಗ ಈ ತಳಿಗಳು ಸೀಡಚೈನನಲ್ಲಿ ಲಭ್ಯವಿರುವುದಿಲ್ಲ.

ದೇಶದಲ್ಲೇ ಮೊಟ್ಟ ಮೊದಲ ಬಾರಿಗೆ ಸಂಕರಣ ತಳಿಗಳ ಅಭಿವೃದ್ಧಿ ಕಾರ್ಯವನ್ನು ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನಲ್ಲಿ ಕೈಗೊಂಡು, 1980 ರಲ್ಲಿ ಭಾರತದ ಮೊಟ್ಟ ಮೊದಲ ಸೂರ್ಯಕಾಂತಿ ಸಂಕರಣ ತಳಿ ಬಿ.ಎಸ್.ಹೆಚ್–1 ನ್ನು ರಾಷ್ಟ್ರಮಟ್ಟದಲ್ಲಿ ಸಾಗುವಳಿಗಾಗಿ ಬಿಡುಗಡೆ ಮಾಡಿದ್ದು ಒಂದು ಪ್ರಮುಖ ಮೈಲಿಗಲ್ಲು. ಇದು ದೇಶದಲ್ಲಿನ ಇತರೆ ಸರ್ಕಾರಿ ಹಾಗೂ ಸರ್ಕಾರೇತರ ಸಂಶೋಧನಾ ಸಂಸ್ಥೆಗಳಲ್ಲಿಯೂ ಸಹ ಸಂಕರಣ ತಳಿಗಳ ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಹಾಗೂ ಹೈಬ್ರಿಡ್ ಯುಗಕ್ಕೆ ನಾಂದಿಯಾಯಿತು.

ಬಿ.ಎಸ್.ಹೆಚ್ – 1 ಸಂಕರಣ ತಳಿಯನ್ನು ಸಿ.ಎಮ್.ಎಸ್ 234 ಎ ಮತ್ತು ಆರ್.ಹೆಚ್.ಎ 274 ತಳಿಗಳ ಸಂಕರಣದಿಂದ ಅಭಿವೃದ್ಧಿಪಡಿಸಲಾಗಿದೆ. ಇದು ಇ.ಸಿ–68415 ಮತ್ತು ಮಾರ್ಡೆನ್ ತಳಿಗಳಿಗಿಂತ ಶೇ. 20 – 30 ರಷ್ಟು ಹೆಚ್ಚಿನ ಇಳುವರಿ ನೀಡುವ ಸಾಮರ್ಥ್ಯ ಹೊಂದಿದ್ದು, ಸುಮಾರು 85 – 90 ದಿವಸಗಳಲ್ಲಿ ಕಟಾವಿಗೆ ಬರುತ್ತದೆ.

ಸೂರ್ಯಕಾಂತಿಯ ಸಂಕರಣ ತಳಿಗಳು ಸಾಧಾರಣ ತಳಿಗಳಿಗಿಂತ ಕೆಲವು ವಿಶೇಷ ಹಾಗೂ ಉತ್ತಮ ಗುಣಗಳನ್ನು ಹೊಂದಿವೆ, ಅವುಗಳೆಂದರೆ;

- ಸಾಧಾರಣ ತಳಿಗಳಿಗಿಂತ ಶೇ. 30 – 40 ರಷ್ಟು ಹೆಚ್ಚು ಇಳುವರಿ ನೀಡುವ ಸಾಮರ್ಥ್ಯ
- ಕಾಳಿನಲ್ಲಿ ಉತ್ತಮ ಗುಣಮಟ್ಟದ ಎಣ್ಣೆಯ ಅಂಶ ಮತ್ತು ಹೆಚ್ಚಿನ ಎಣ್ಣೆಯ ಇಳುವರಿ
- ಹೆಚ್ಚಿನ ಸಾವಯುವ ಮತ್ತು ರಸಗೊಬ್ಬರಗಳ ಅಂಶಗಳನ್ನು ಬಳಸಿಕೊಂಡು ಹೆಚ್ಚಿನ ಇಳುವರಿ ಕೊಡುವ ಸಾಮರ್ಥ್ಯ
- ಗಿಡಗಳ ಬೆಳವಣಿಗೆ ಒಂದೇ ಸಮನಾಗಿದ್ದು, ಒಂದೇ ಕಾಲಕ್ಕೆ ಕಟಾವಿಗೆ ಬರುವ ಗುಣ
- ರೋಗ ಹಾಗೂ ಕೀಟಗಳ ಬಾಧೆ ತಡೆದುಕೊಳ್ಳುವ ಶಕ್ತಿ
- ಒಣ ಹವೆಯನ್ನು ತಡೆದುಕೊಳ್ಳುವ ಶಕ್ತಿ
- ಗಿಡದ ಕಾಂಡವು ಬಲಿಷ್ಠವಾಗಿದ್ದು, ಮಳೆ, ಗಾಳಿ, ತೆನೆಯ ಭಾರಕ್ಕೆ ಬೀಳದಿರುವುದು
- ತೆನೆಗಳಲ್ಲಿ ಸ್ವಂತ ಬೀಜ ಕಟ್ಟುವ ಅಂಶ ಹೆಚ್ಚಾಗಿರುವುದು

ಸುಧಾರಿತ ಸೂರ್ಯಕಾಂತಿ ಸಂಕರಣ ತಳಿಗಳು

ಸತತ ಸಂಶೋಧನೆ ಹಾಗೂ ತಳಿ ಅಭಿವೃದ್ಧಿ ಕಾರ್ಯಗಳಿಂದಾಗಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಕೇಂದ್ರದಿಂದ ಕೆ.ಬಿ.ಎಸ್.ಹೆಚ್–41, ಕೆ.ಬಿ.ಎಸ್.ಹೆಚ್–42 ಹಾಗೂ ಇತ್ತೀಚೆಗೆ ಕೆ.ಬಿ.ಎಸ್.ಹೆಚ್–53 ಸಂಕರಣ ತಳಿಗಳನ್ನು ಅಭಿವೃದ್ಧಿ ಪಡಿಸಿ ರಾಜ್ಯ ಮಟ್ಟದಲ್ಲಿಯೂ ಮತ್ತು ಕೆ.ಬಿ.ಎಸ್.ಹೆಚ್–1 ಹಾಗೂ ಕೆ.ಬಿ.ಎಸ್.ಹೆಚ್–44 ಸಂಕರಣ ತಳಿಗಳನ್ನು ರಾಷ್ಟ್ರಮಟ್ಟದಲ್ಲಿ ಸಾಗುವಳಿಗಾಗಿ ಬಿಡುಗಡೆ ಮಾಡಲಾಗಿದ್ದು, ಅವುಗಳ ವಿವಿಧ ಗುಣ ವಿಶೇಷಣಗಳನ್ನು ಸಂಕ್ಷಿಪ್ತವಾಗಿ ಇಲ್ಲಿ ವಿವರಿಸಲಾಗಿದೆ.

ಬೆಂಗಳೂರು ಕೇಂದ್ರದಿಂದ ಬಿಡುಗಡೆಯಾದ ಸಂಕರಣ ತಳಿಗಳು

ಕೆ. ಬಿ. ಎಸ್. ಹೆಚ್–1

1. ಬಿಡುಗಡೆಯಾದ ವರ್ಷ : 1992, ರಾಷ್ಟ್ರ ಮಟ್ಟದಲ್ಲಿ
2. ವಂಶಾವಳಿ (ಪಾಲಕರು) : ಸಿ.ಎಮ್.ಎಸ್ 234ಎ x ಆರ್.ಹೆಚ್.ಎ 6ಡಿ1
3. ಬೆಳೆಯ ಅವಧಿ (ದಿವಸ) : 90 – 92

4. ತಳಿಯ/ಗಿಡದಎತ್ತರ (ಸೆಂ.ಮೀ) :160 – 180
5. ಬೀಜದ ಬಣ್ಣ : ಕಪ್ಪು
6. ಕಾಳಿನ ಇಳುವರಿ (ಕಿ.ಗ್ರಾಂ/ಹೆ.):
ಖುಷ್ಕಿ : 800 – 1000
ನೀರಾವರಿ : 1500 – 2000
7. ಕಾಳಿನ ಎಣ್ಣೆಯ ಅಂಶ(%): 42 – 44

ಕೆ. ಬಿ. ಎಸ್. ಹೆಚ್–41

1. ಬಿಡುಗಡೆಯಾದ ವರ್ಷ : 2001, ರಾಜ್ಯ ಮಟ್ಟದಲ್ಲಿ
2. ವಂಶಾವಳಿ (ಪಾಲಕರು) : ಸಿ.ಎಮ್.ಎಸ್. 234ಎ x ಆರ್.ಹೆಚ್.ಎ95ಸಿ1
3. ಬೆಳೆಯ ಅವಧಿ (ದಿವಸ) : 90 – 92
4. ತಳಿಯ / ಗಿಡದ ಎತ್ತರ (ಸೆಂ.ಮೀ.) : 180 – 195
5. ಬೀಜದ ಬಣ್ಣ : ಕಪ್ಪು
6. ಕಾಳಿನ ಇಳುವರಿ (ಕಿ.ಗ್ರಾಂ/ಹೆ.):
ಖುಷ್ಕಿ : 900 – 1100
ನೀರಾವರಿ : 1700 – 2500
7. ಕಾಳಿನ ಎಣ್ಣೆಯ ಅಂಶ(%): 40 – 42

ಕೆ. ಬಿ. ಎಸ್. ಹೆಚ್ 42

1. ಬಿಡುಗಡೆಯಾದ ವರ್ಷ : 2001, ರಾಜ್ಯ ಮಟ್ಟದಲ್ಲಿ
2. ವಂಶಾವಳಿ (ಪಾಲಕರು) : ಸಿ.ಎಮ್.ಎಸ್. 851ಎ x ಆರ್.ಹೆಚ್.ಎ95ಸಿ1
3. ಬೆಳೆಯ ಅವಧಿ (ದಿವಸ) : 90 – 95
4. ತಳಿಯ / ಗಿಡದಎತ್ತರ (ಸೆಂ.ಮೀ) : 170 – 185
5. ಬೀಜದ ಬಣ್ಣ : ಕಪ್ಪು
6. ಕಾಳಿನ ಇಳುವರಿ (ಕಿ.ಗ್ರಾಂ/ಹೆ.):
ಖುಷ್ಕಿ : 800 – 1000
ನೀರಾವರಿ : 1600 – 2350
7. ಕಾಳಿನ ಎಣ್ಣೆಯ ಅಂಶ (%): 39 – 41

ಕೆ. ಬಿ. ಎಸ್. ಹೆಚ್–44

1. ಬಿಡುಗಡೆಯಾದ ವರ್ಷ : 2002, ರಾಷ್ಟ್ರ ಮಟ್ಟದಲ್ಲಿ
2. ವಂಶಾವಳಿ (ಪಾಲಕರು) : ಸಿ.ಎಮ್.ಎಸ್. 17ಎ x ಆರ್.ಹೆಚ್.ಎ95ಸಿ1
3. ಬೆಳೆಯ ಅವಧಿ (ದಿವಸ) : 95 – 100
4. ತಳಿಯ / ಗಿಡದಎತ್ತರ (ಸೆಂ.ಮೀ.) : 190 – 200
5. ಬೀಜದ ಬಣ್ಣ : ಮಸುಕಾದ ಬಿಳಿ ಗೆರೆಗಳಿಂದ ಕೂಡಿದಕಂದು ಬಣ್ಣ
6. ಕಾಳಿನ ಇಳುವರಿ (ಕಿ.ಗ್ರಾಂ/ಹೆ):
ಖುಷ್ಕಿ : 1000 – 1200
ನೀರಾವರಿ : 1750 – 2800
7. ಕಾಳಿನ ಎಣ್ಣೆಯ ಅಂಶ(%) : 36 – 38

ಕೆ. ಬಿ. ಎಸ್. ಹೆಚ್–53

1. ಬಿಡುಗಡೆಯಾದ ವರ್ಷ : 2008, ರಾಜ್ಯ ಮಟ್ಟದಲ್ಲಿ
2. ವಂಶಾವಳಿ (ಪಾಲಕರು) : ಸಿ.ಎಮ್.ಎಸ್ 335ಎ x ಆರ್.ಹೆಚ್.ಎ95 ಸಿ 1
3. ಬೆಳೆಯ ಅವಧಿ (ದಿವಸ) : 95 – 100
4. ತಳಿಯ / ಗಿಡದಎತ್ತರ (ಸೆಂ.ಮೀ) : 180 – 200
5. ಬೀಜದ ಬಣ್ಣ : ಕಪ್ಪು
6. ಕಾಳಿನ ಇಳುವರಿ (ಕಿ.ಗ್ರಾಂ/ಹೆ.):
ಖುಷ್ಕಿ : 1000 – 1100
ನೀರಾವರಿ : 1700 – 2700
7. ಕಾಳಿನ ಎಣ್ಣೆಯ ಅಂಶ(%): 42 – 44
8. ವಿಶೇಷತೆಗಳು : ಬೂದಿ ರೋಗ ನಿರೋಧಕ ಶಕ್ತಿ

ಈ ಮೇಲ್ಕಂಡ ಸಂಕರಣ ತಳಿಗಳಲ್ಲದೆ ಕೃಷಿ ವಿಶ್ವವಿದ್ಯಾನಿಲಯ, ಧಾರವಾಡ/ರಾಯಚೂರಿನಿಂದ ಡಿ.ಎಸ್.ಹೆಚ್–1, ಆರ್.ಎಸ್.ಎಫ್.ಹೆಚ್–1 ಮತ್ತು ಇತ್ತೀಚೆಗೆ ಆರ್.ಎಸ್.ಎಫ್.ಹೆಚ್–130 ಎಂಬ ಸಂಕರಣ ತಳಿಗಳನ್ನು ರಾಜ್ಯಮಟ್ಟದಲ್ಲಿ ಬೆಳೆಯಲು ಬಿಡುಗಡೆ ಮಾಡಲಾಗಿದೆ. ರಾಯಚೂರು/ಧಾರವಾಡ ಕೇಂದ್ರದಿಂದ ಸಾಗುವಳಿಗಾಗಿ ಬಿಡುಗಡೆ ಮಾಡಲಾಗಿರುವ ಸಂಕರಣ ತಳಿಗಳು ಮತ್ತು ಅವುಗಳ ಗುಣ ವಿಶೇಷಣಗಳು

ಡಿ. ಎಸ್. ಹೆಚ್ – 1

1. ಬಿಡುಗಡೆಯಾದ ವರ್ಷ : 1997, ರಾಜ್ಯ ಮಟ್ಟದಲ್ಲಿ
2. ವಂಶಾವಳಿ (ಪಾಲಕರು) : ಸಿ.ಎಮ್.ಎಸ್– ಡಿ.ಎಸ್.ಎಫ್ 15ಎ x ಆರ್–857
3. ಬೆಳೆಯ ಅವಧಿ (ದಿವಸ) : 90 – 95
4. ತಳಿಯ / ಗಿಡದಎತ್ತರ (ಸೆಂ.ಮೀ.) : 140 – 150
5. ಬೀಜದ ಬಣ್ಣ : ಕಪ್ಪು
6. ಕಾಳಿನ ಇಳುವರಿ (ಕಿ.ಗ್ರಾಂ/ಹೆ.):
   ಖುಷ್ಕಿ : 800 – 1000
   ನೀರಾವರಿ : 1200 – 1500
7. ಕಾಳಿನ ಎಣ್ಣೆಯ ಅಂಶ(%) : 38 – 39

ಆರ್. ಎಸ್. ಎಫ್. ಹೆಚ್–1

1. ಬಿಡುಗಡೆಯಾದ ವರ್ಷ : 2003, ರಾಜ್ಯ ಮಟ್ಟದಲ್ಲಿ
2. ವಂಶಾವಳಿ (ಪಾಲಕರು) : ಸಿ.ಎಮ್.ಎಸ್–103ಎ x ಆರ್– 64. ಎನ್.ಬಿ
3. ಬೆಳೆಯ ಅವಧಿ (ದಿವಸ) : 95 – 100
4. ತಳಿಯ / ಗಿಡದ ಎತ್ತರ (ಸೆಂ.ಮೀ.) : 150 – 160
5. ಬೀಜದ ಬಣ್ಣ : ಕಪ್ಪು
6. ಕಾಳಿನ ಇಳುವರಿ (ಕಿ.ಗ್ರಾಂ/ಹೆ.):
   ಖುಷ್ಕಿ : 800 – 1000
   ನೀರಾವರಿ : 1500 – 2000
7. ಕಾಳಿನ ಎಣ್ಣೆಯ ಅಂಶ (%): 38 – 40
8. ವಿಶೇಷತೆಗಳು : ತುಕ್ಕುರೋಗ ನೀರೊಧಕ ಶಕ್ತಿಹೆಚ್ಚಿನ ಓಲೀಕ ಆಮ್ಲದ ಪ್ರಮಾಣ (80 – 85%)

ಆರ್. ಎಸ್. ಎಫ್. ಹೆಚ್. –130

1. ಬಿಡುಗಡೆಯಾದ ವರ್ಷ : 2008, ರಾಜ್ಯ ಮಟ್ಟದಲ್ಲಿ
2. ವಂಶಾವಳಿ (ಪಾಲಕರು) : ಸಿ.ಎಮ್.ಎಸ್– 104ಎxಆರ್– 630
3. ಬೆಳೆಯ ಅವಧಿ (ದಿವಸ) : 95 – 100
4. ತಳಿಯ / ಗಿಡದ ಎತ್ತರ (ಸೆಂ.ಮೀ.) : 165 – 170
5. ಬೀಜದ ಬಣ್ಣ : ಕಪ್ಪು
6. ಕಾಳಿನ ಇಳುವರಿ (ಕಿ.ಗ್ರಾಂ/ಹೆ.):
   ಖುಷ್ಕಿ : 1200 – 1500
   ನೀರಾವರಿ : 1800 – 2500
7. ಕಾಳಿನ ಎಣ್ಣೆಯ ಅಂಶ(%) : 39 – 43

1. ಬಿಡುಗಡೆಯಾದ ವರ್ಷ : 2015, ರಾಜ್ಯಮಟ್ಟದಲ್ಲಿ
2. ವಂಶಾವಳಿಪಾಲಕರು : ಸಿ.ಎಮ್.ಎಸ್–38ಎ x ಆರ್–127–1
3. ಬೆಳೆಯ ಅವಧಿ (ದಿವಸ) : 95 – 100
4. ತಳಿಯ / ಗಿಡದ ಎತ್ತರ (ಸೆಂ.ಮೀ) : 165 – 175
5. ಬೀಜದಬಣ್ಣ : ಕಪ್ಪು
6. ಕಾಳಿನ ಇಳುವರಿ (ಕಿ.ಗ್ರಾಂ/ಹೆ.) :
   ಖುಷ್ಕಿ : 1400 – 1600
   ನೀರಾವರಿ : 1800 – 2000
7. ಕಾಳಿನ ಎಣ್ಣೆಯ ಅಂಶ (%): 39 – 40
8. ವಿಶೇಷತೆಗಳು : ಎಲೆ ಚುಕ್ಕೆರೋಗ ನಿರೋಧಕ ಶಕ್ತಿ

ಈ ಮೇಲ್ಕಂಡ ಸಂಕರಣ ತಳಿಗಳಲ್ಲದೆ, ಖಾಸಗಿ ಸಂಸ್ಥೆಗಳೂ ಸಹ ಹಲವಾರು ಸಂಕರಣ ತಳಿಗಳನ್ನು ಅಭಿವೃದ್ಧಿ ಪಡಿಸಿ ಸಾಗುವಳಿಗಾಗಿ ಬಿಡುಗಡೆ ಮಾಡಿವೆ.

ಒಮ್ಮೆಯಾವುದೇ ಸಂಕರಣ ತಳಿಯ ಬೀಜವನ್ನು ಉಪಯೋಗಿಸಿ ಬೆಳೆ ಬೆಳೆದ ನಂತರ, ಇದರಿಂದ ಪಡೆದ ಬೀಜವನ್ನು ಮತ್ತೊಮ್ಮೆ ಬೆಳೆ ಬೆಳೆಯಲು ಬಳಸಬಾರದು. ಪ್ರತಿ ಬಾರಿಯೂ ಹೊಸದಾಗಿ ಸಂಕರಣ ತಳಿಗಳ ಬೀಜವನ್ನು ಉಪಯೋಗಿಸುವುದು ಅತ್ಯವಶ್ಯಕ.

ಇದಲ್ಲದೆ ಹಲವಾರು ಅಧಿಕ ಇಳುವರಿಯ ಆಶಾದಾಯಕ ಸಂಕರಣ ತಳಿಗಳು ಪ್ರಯೋಗದ ವಿವಿಧ ಹಂತಗಳಲ್ಲಿವೆ.

*****